RAICHUR UNIVERSITY
ಎಲ್ಲೆಯಿಂದ ಅಮರತ್ವದ

ಕೃಷ್ಣತುಂಗಾ

ರಾಯಚೂರು ವಿವಿ ಪತ್ರಿಕೋದ್ಯಮ ವಿದ್ಯಾರ್ಥಿಯರ ಪ್ರಾಯೋಗಿಕ ಪತ್ರಿಕೆ

ನವದೆಹಲಿ : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬುಧವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸೌಹಾರ್ದಯುತವಾಗಿ ಭೇಟಿಯಾಗಿ ಮಾತುಕತೆ ನಡೆಸಿದರು.

ಸಂಪುಟ :1 ಸಂಚಿಕೆ :24 ಪ್ರಧಾನಸಂಪಾದಕ: ಪ್ರೊ.ಪ್ರಾರ್ವತಿ ಸಿ.ಎಸ್ 25-30 ಸೆಪ್ಟಂಬರ್ 2022 ರಾಯಚೂರು ಪುಟ:2

ರಾಯಚೂರು ವಿವಿ: ರಾಷ್ಟ್ರೀಯ ಸೇವಾ ದಿನಾಚರಣೆ ಅಂಗವಾಗಿ ಸಾವಿರ 'ಮಹಾಫನೆ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ

ರಾಯಚೂರು ವಿವಿಯನ್ನು ಹಸಿರು ಕ್ಯಾಂಪಸ್‌ನ್ನಾಗಿಸುವ ಉದ್ದೇಶ : ಪ್ರೊ.ಹರೀಶ್ ರಾಮಸ್ವಾಮಿ

ಕೃಷ್ಣತುಂಗಾ, ರಾಯಚೂರು :

ಸಸಿಗಳನ್ನು ನೆಟ್ಟು ಅವುಗಳನ್ನು ಪೋಷಿಸುವುದು ಅತಿ ಅವಶ್ಯವಾಗಿದ್ದು, ಈ ನಿಟ್ಟಿನಲ್ಲಿ ನಮ್ಮ ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಕೋಶ ಹಾಗೂ ಮಹಿಂದ್ರಾ ಫೈನಾನ್ಸ್ ಎಂಪವರ್ ಟ್ರಸ್ಟ್ ಸಹಯೋಗದಿಂದ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದು ಶ್ಲಾಘನೀಯ ಎಂದು ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಹರೀಶ್ ರಾಮಸ್ವಾಮಿ ಹೇಳಿದರು.

ರಾಯಚೂರು ವಿಶ್ವವಿದ್ಯಾಲಯ ಹಾಗೂ ತಮಿಳುನಾಡಿನ ತಿರುಚಿನಾಪಳ್ಳಿಯ ಮಹಿಂದ್ರಾ ಫೈನಾನ್ಸ್‌ನ ಎಂಪವರ್ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಸೇವಾ ಯೋಜನಾ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಭಾಗದಲ್ಲಿ ಬಿಸಿಲು ಹಾಗೂ ಅತಿ ಬಿಸಿಲುಕಾಲ ಎಂಬ ಮಾತಿದ್ದು, ರಾಯಚೂರು ವಿಶ್ವವಿದ್ಯಾಲಯವನ್ನು ಹಸಿರು ಕ್ಯಾಂಪಸ್‌ನ್ನಾಗಿಸಲು ಉದ್ದೇಶಿತ ಗುರಿತಲುಪಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಹಾಗೆಯೇ ಮಹಿಂದ್ರಾ ಫೈನಾನ್ಸ್ ಎಂಪವರ್ ಟ್ರಸ್ಟ್ ಅವರು ಉಚಿತ ಸಸಿ ನೆಡುವ ಕಾರ್ಯಕ್ರಮಗಳ ಜೊತೆಗೆ ಇನ್ನಿತರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಮ್ಮ ವಿಶ್ವವಿದ್ಯಾಲಯ ಸಂಯೋಜನೆ ಗೊಳ್ಳಲು ಬಯಸುತ್ತದೆ ಎಂದು ಟ್ರಸ್ಟ್‌ನ ಅಧಿಕಾರಿಗಳಿಗೆ ಒಡಂಬಡಿಕೆ ಮಾಡಿಕೊಳ್ಳಲು ಇಚ್ಛಿಸುತ್ತೇವೆ ಎಂದು ಅವರು ಅಭಿಪ್ರಾಯ ಪಟ್ಟರು.

ಪ್ರಸ್ತುತ ದಿನಮಾನದಲ್ಲಿ ಪರಿಸರ ಸಂರಕ್ಷಣೆ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕರ ಹೊಣೆಗಾರಿಕೆಯಾಗಿದೆ, ಕೇವಲ ಸಸಿ ನಡುವುದಷ್ಟೆ ಅಲ್ಲ ಸಸಿಗಳನ್ನು ಪೋಷಿಸುವ ಕೆಲಸ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹೇಳಿದರು.

ಎನ್.ಎಸ್.ಎಸ್.ಕಾರ್ಯಕ್ರಮ ಸಂಯೋಜನಾಧಿಕಾರಿಗಳಾದ ಡಾ.ಜಿ.ಎಸ್.ಬಿರಾದಾರ ಮಾತನಾಡಿ, ಪ್ರಕೃತಿಗೂ ಮಾನವನಿಗೂ ಗಾಢವಾದ ಸಂಬಂಧವಿದೆ, ನಾವು ಪ್ರಕೃತಿಯಲ್ಲಿ ಹುಟ್ಟಿ ಬದುಕಿ ಬಾಳುತ್ತೇವೆ ಅದರ ಕಾಳಜಿ ಪ್ರತಿಯೊಬ್ಬ ವಿದ್ಯಾರ್ಥಿಗಳ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ತಮಿಳುನಾಡಿನ ತಿರುಚಿನಾಪಳ್ಳಿಯ ಮಹಿಂದ್ರಾ ಫೈನಾನ್ಸ್‌ನ ಎಂಪವರ್ ಟ್ರಸ್ಟ್ ರಾಜ್ಯ ಸಂಪನ್ಮೂಲ ಅಧಿಕಾರಿ ಕಾರ್ತಿಕೆಯನ್ ಷಣ್ಮುಗಮ್ ಹಾಗೂ ಸಂಸ್ಥಾಪಕ ನರ್ದೇಶಕಿಯಾದ ಡಾ.ಪಿ.ಕನ್ನಿವೋಳಿ ಅವರು ಕಾರ್ಯಕ್ರಮದಲ್ಲಿ ರಾಯಚೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಕೋಶಕ್ಕೆ ಒಂದು ಸಾವಿರ ಮಹಾಫನ ಸಸಿಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ರಾಯಚೂರು ವಿವಿಯ ಕುಲಸಚಿವರಾದ ಪ್ರೊ.ವಿಶ್ವನಾಥ.ಎವಿ, ವೌಲ್ಯವಾಪನ ಕುಲಸಚಿವರಾದ ಪ್ರೊ.ಯರಿಸ್ವಾಮಿ, ವಿವಿಯ ಸಿಂಡಿಕೇಟ್ ಸದಸ್ಯರಾದ ಡಾ.ಶಿವಬಸಪ್ಪ ಮಾಲಿಪಾಟೀಲ್, ಶಂಕರ ರೆಡ್ಡಿ, ಕಾವೇರಿ ಕೆಧಾರ್‌ನಾಥ್, ಮೋಹನ್ ಕುಮಠಕರ್, ವೈ.ಎಮ್. ಭಜಂತ್ರಿ, ನಾಗೇಂದ್ರ ಪ್ರಸಾದ, ಜಗದೀಶ, ಹಾಗೂ ವಿವಿಧ ಅಧ್ಯಯನ ವಿಭಾಗಗಳ ಉಪನ್ಯಾಸಕರು, ಎನ್.ಎಸ್.ಎಸ್. ಘಟಕದ ವಿದ್ಯಾರ್ಥಿಗಳು, ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿಗಳಾದ ಡಾ.ಪದ್ಮಜಾ ದೇಸಾಯಿ ನಿರೂಪಿಸಿದರು, ಬಜಾರಪ್ಪ ವಂದಿಸಿದರು.

ರಾಯಚೂರು ವಿವಿ: ರಾಷ್ಟ್ರೀಯ ಸೇವಾ ಯೋಜನಾ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮಕ್ಕೆ ರಾಯಚೂರು ವಿವಿಯ ಕುಲಪತಿ ಪ್ರೊ.ಹರೀಶ್ ರಾಮಸ್ವಾಮಿ ಚಾಲನೆ ನೀಡಿದರು.

ಕವಿತಾಳ: ಯುವಾ ಬ್ರಿಗೇಡ್ ವತಿಯಿಂದ ದೀಪಾವಳಿ ಆಚರಣೆ

– ದೊಡ್ಡಪ್ಪ, ಪತ್ರಿಕೋದ್ಯಮ ವಿದ್ಯಾರ್ಥಿ

ಕೃಷ್ಣತುಂಗಾ, ರಾಯಚೂರು : ನಗರದ ಕವಿತಾಳ ಪಟ್ಟಣದ ಕಲ್ಮಠ ಕಲ್ಯಾಣ ಮಂಟಪದಲ್ಲಿ ಯುವಾ ಬ್ರಿಗೇಡ್ ವತಿಯಿಂದ ಅಖಂಡ ಭಾರತದ ಸಂಕಲ್ಪದೊಂದಿಗೆ ದೀಪ ಹಚ್ಚುವ ಮುಖಾಂತರ ದೀಪಾವಳಿಯನ್ನು ಆಚರಿಸಲಾಯಿತು.

ಯುವ ಬ್ರಿಗೇಡ್ ಹಮ್ಮಿಕೊಂಡಿದ್ದ ಅಖಂಡ ಭಾರತಕ್ಕಾಗಿ ಒಂದು ದೀಪ ಎಂಬ ಈ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವನ್ನು ವಹಿಸಿದ್ದ ಕವಿತಾಳ ಕಲ್ಮಠದ ಪೂಜ್ಯ ಶ್ರೀ ಯೋಗೇಶ್ವರ ದೇವರು, ತಮ್ಮ ಆಶೀರ್ವಚನದಲ್ಲಿ ಯುವ ಬ್ರಿಗೇಡ್‌ನ ಕಾರ್ಯಗಳನ್ನು ಶ್ಲಾಘಿಸಿದರು. ಮತ್ತು ಭಾರತೀಯ ಸಂಸ್ಕೃತಿ, ಪರಂಪರೆಗಳನ್ನ ಮರೆತಿರುವ ಇಂದಿನ ಪೀಳಿಗೆಗೆ ಅದರ ಗತವೈಭವವನ್ನು ತಿಳಿಯಪಡಿಸುವ ಅಗತ್ಯತೆ ಇದೆ. ಜಾತಿಯ ಸಂಕೋಲೆಯನ್ನು ತೊರೆದು ಅಖಂಡ ಭಾರತಕ್ಕಾಗಿ ಪ್ರತಿಯೊಬ್ಬ ಭಾರತೀಯರು ಶ್ರಮಿಸಬೇಕೆಂದು ಹೇಳಿದರು. ಕವಿತಾಳ ಯುವ ಬ್ರಿಗೇಡ್‌ನ ಸಂಚಾಲಕರಾದ ದೇವರಾಜ್ ನಾಗಲೀಕರ ಕಾರ್ಯಕ್ರಮ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದರು.

ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮುಖಾಂತರ ಹಾಗೂ ಅಖಂಡ ಭಾರತದ ನಕಾಶೆಗೆ ದೀಪಾಲಂಕಾರ ಮಾಡುವುದರ ಮುಖಾಂತರ ವಿಶಿಷ್ಟವಾಗಿ ದೀಪಾವಳಿಯನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಯುವ ಬ್ರಿಗೇಡ್ ನ ಕಾರ್ಯಕರ್ತರಾದ ಸಂಗಪ್ಪ ಗೊರೆಬಾಳ್ ,ಸಿದ್ದಯ್ಯ ಸ್ವಾಮಿ, ಉದಯ್ ಶೆಟ್ಟಿ ಇಲ್ಲೂರ, ಸಂಗಮೇಶ್ ಸಾಲ್ಮನಿ ,ವೆಂಕಟೇಶ್ ಚೆಲ್ಲಾ, ನಾಗರಾಜ್ ಹೂರ್ಗಾ, ವೀರೇಶ್ ಹೂರ್ಗಾ, ಮಂಜುನಾಥ್ ಪರ್ತಾ, ವೀರಭದ್ರ ಪತ್ತಾರ್, ನೀಲಕಂಠ ಭೋವಿ, ಶಂಕರ್ ನಾಗಲೀಕರ್, ಮಲ್ಲಿಕಾರ್ಜುನ್ ಸಜ್ಜನ್, ಸೇರಿದಂತೆ ವಿವಿಧ ಮುಖಂಡರು, ಮಹಿಳೆಯರು ಮಕ್ಕಳು ಹಾಜರಿದ್ದರು.

ಅನ್ವರಿ – ಕವಿತಾಳ ರಸ್ತೆ ಕಾಮಗಾರಿ ಆರಂಭ ಹರ್ಷದಲ್ಲಿ ಜನತೆ

– ದೊಡ್ಡಪ್ಪ, ಪತ್ರಿಕೋದ್ಯಮ ವಿದ್ಯಾರ್ಥಿ

ಕೃಷ್ಣತುಂಗಾ, ರಾಯಚೂರು : ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಅನ್ವರಿ– ಕವಿತಾಳ ಮುಖ್ಯರಸ್ತೆಯ ಕಾಮಗಾರಿಯು ಆರಂಭವಾಗಿದ್ದು, ಕಾರ್ಯಬರದಿಂದ ಸಾಗಿದೆ.

ಸುಮಾರು ವರ್ಷಗಳಿಂದ ರಸ್ತೆಯು ಡಾಂಬರೀಕರಣಗೊಳ್ಳದೆ ತಗ್ಗುಗಳಿಂದ ಕೂಡಿದ ರಸ್ತೆಯಲ್ಲಿ ಕಾಮಗಾರಿಯು ಯಾವಾಗ ಆರಂಭವಾಗುತ್ತದೆಯೋ ಎಂದು ಜಾತಕ ಪಕ್ಷಿಯಂತೆ ಕಾಯುತ್ತಿದ್ದರು. ಆದರೆ ಈಗ ರಸ್ತೆಗೆ ಕಾಯಕಲ್ಪ ಕೂಡಿ ಬಂದಿದ್ದು ಕಾಮಗಾರಿಯು ಪ್ರಾರಂಭವಾಗಿದೆ.

ಇತ್ತೀಚೆಗೆ ಲಿಂಗಸುಗೂರು ಶಾಸಕರಾದ ಶ್ರೀ ಡಿ.ಎಸ್. ಹುಲಗೇರಿ ಅವರು ಎಸ್ ಎಚ್ ಡಿ ಪಿ ಹಾಗೂ ಅಪೆಂಡಿಕ್ಸ್-ಇ ಯೋಜನೆಯ ಅಡಿಯಲ್ಲಿ ಸುಮಾರು 10 ಕೋಟಿ ವೆಚ್ಚದ ಅನ್ವರಿ – ಕವಿತಾಳ ರಸ್ತೆ ಕಾಮಗಾರಿಗೆ ಅನ್ವರಿ ಗ್ರಾಮದ ಆಂಜನೇಯ ದೇವಸ್ಥಾನದ ಹತ್ತಿರ ಭೂಮಿ ಪೂಜೆಯನ್ನು ನೆರವೇರಿಸಿದ್ದರು.

ಕವಿತಾಳದಿಂದ ಹಟ್ಟಿಗೆ ಸಂಚರಿಸಲು ಈ ಮಾರ್ಗವು ಸಮೀಪವಾಗಿದ್ದು, ಇದರಿಂದ ಬಹಳಷ್ಟು ಜನತೆಗೆ ಅನುಕೂಲಕರವಾಗಲಿದೆ. ಹಾಗೂ ಅನ್ವರಿ–ಕವಿತಾಳ ಮಾರ್ಗವು ಮಧ್ಯದಲ್ಲಿ ಕಾಡಿನಿಂದ ಆವೃತವಾಗಿದ್ದು, ಕಾಡುಪ್ರಾಣಿಗಳ ಹಾವಳಿಯಿಂದ ರಾತ್ರಿ ಸಂಚರಿಸಲು ಭಯವಾಗುತ್ತಿತ್ತು. ರಸ್ತೆಯು ಹೊದೆಗೆಟ್ಟಿದ್ದರಿಂದ 6 ಕಿ.ಮೀ ಸಂಚರಿಸಲು ಅರ್ಧ ಗಂಟೆ ಸಮಯ ತೆಗೆದುಕೊಳ್ಳುತ್ತಿತ್ತು. ದಶಕಗಳ ಕನಸು ನನಸಾಗಿದ್ದರಿಂದ ಜನತೆ ಹರ್ಷ ವ್ಯಕ್ತಪಡಿಸುತ್ತಿದ್ದಾರೆ.

"ಸುಮಾರು ವರ್ಷಗಳಿಂದ ರಸ್ತೆಯು ಹೊದಗಿಟ್ಟಿದ್ದು, ಪ್ರತಿದಿನವೂ ರಸ್ತೆಯಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಗಾಡಿಯು ರಿಪೇರಿಗೆ ಬರುತ್ತಿತ್ತು. ವಾಹನ ಓಡಿಸಲು ಹರಸಾಹಸ ಪಡಬೇಕಾಗಿತ್ತು. ರಸ್ತೆ ಕಾಮಗಾರಿಯು ಆರಂಭವಾಗಿದೆ ಬೇಗನೆ ಮುಗಿಯಲಿ ಎಂಬುದು ನಮ್ಮ ಆಸೆ"

– ಕುಮಾರಸ್ವಾಮಿ ಅನ್ವರಿ,
ವಾಹನ ಚಾಲಕ

ರಾಯಚೂರು ವಿವಿ: ಅಮೃತ ಪುಸ್ತಕ ಮಾರಾಟ ಅಭಿಯಾನ ಮತ್ತು ಸಾಕ್ಷ್ಯಚಿತ್ರ ಪ್ರದರ್ಶನ

ಪುಸ್ತಕ ಎಂದಿಗೂ ಉತ್ತಮ ಸ್ನೇಹಿತ : ಪ್ರೊ.ಹರೀಶ ರಾಮಸ್ವಾಮಿ

ಕೃಷ್ಣತುಂಗಾ, ರಾಯಚೂರು : ಪುಸ್ತಕಗಳು ನಮ್ಮ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಪುಸ್ತಕ ನಮ್ಮಿಂದ ಎಂದಿಗೂ ದೂರ ಹೋಗದ ಉತ್ತಮ ಸ್ನೇಹಿತನಂತೆ ಪುಸ್ತಕ ಓದಿನಿಂದ ಆಗುವ ತೃಪ್ತಿ ಗೂಗಲ್‌ನಿಂದ ಸಿಗುವುದಿಲ್ಲ ಎಂದು ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಹರೀಶ ರಾಮಸ್ವಾಮಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಹಾಗೂ ರಾಯಚೂರು ವಿಶ್ವವಿದ್ಯಾಲಯದ ಸಹಯೋಗದಲ್ಲಿ ಅಮೃತ ಭಾರತಿಗೆ ಕನ್ನಡದಾರತಿ ಅಂಗವಾಗಿ ಅಮೃತ ಪುಸ್ತಕ ಪ್ರದರ್ಶನ ಮಾರಾಟ ಅಭಿಯಾನ ಹಾಗೂ ಸಾಕ್ಷ್ಯಚಿತ್ರ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪುಸ್ತಕಗಳಿಲ್ಲದೆ ನಮ್ಮ ಹಿಂದಿನ ಪೂರ್ವಜರು ಸಂಸ್ಕೃತಿಗಳು ನಾಗರಿಕತೆಗಳ ಇಂದಿನ ಅರಿವು ಅಸಾಧ್ಯವಾಗಿತ್ತು. ಪುಸ್ತಕಗಳು ಜ್ಞಾನಕ್ಕೆ ಮತ್ತು ಆನಂದಕ್ಕೆ ಪ್ರೋತ್ಸಾಹಕಗಳು, ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದುತ್ತ ಸಂಶೋಧನಾ ಹಾಗೂ ವಿಮರ್ಶಾ ಜ್ಞಾನವನ್ನು ಹೆಚ್ಚಿಸಿಕೊಂಡು ವಿದ್ಯಾರ್ಥಿಗಳು ಉಪನ್ಯಾಸಕರು ಪುಸ್ತಕಗಳನ್ನು ಬರೆಯುವಲ್ಲಿ ಪ್ರೇರೇಪಿತಗೊಂಡು ರಾಯಚೂರು ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಮತ್ತು ಆಸಕ್ತಿಕರ ಪುಸ್ತಕಗಳು ಹೆಚ್ಚು ಮೂಡಿಬರಲಿ ಅಂತಹ ಪ್ರಯತ್ನಗಳಿಗೆ ವಿಶ್ವವಿದ್ಯಾಲಯ ಸದಾಸಿದ್ದ ಎಂದು ತಿಳಿಸಿದರು.

ಕುಲಸಚಿವರು ಮೌಲ್ಯಮಾಪನ ಪ್ರೊ.ಯರಿಸ್ವಾಮಿ ಸಾಕ್ಷ್ಯಚಿತ್ರಕ್ಕೆ ಚಾಲನೆ ನೀಡಿದರು. ಭಾರತ ಇಂದು 75 ವರ್ಷಗಳ ಸ್ವಾತಂತ್ರ್ಯವನ್ನು ಆಚರಿಸಲು ಕಾರಣಿಕರ್ತರಾದ ಎಲ್ಲ ಮಹನೀಯರ, ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರ, ಸಾಮಾನ್ಯರಾಗಿಯೂ ಸಂಗ್ರಾಮದಲ್ಲಿ ಅಸಮಾನ್ಯ ಸಾಹಸ ತೋರಿದ, ವಿವಿಧ ಕ್ಷೇತ್ರಗಳಲ್ಲಿ ಸ್ವಾತಂತ್ರ್ಯ ಅರಿವು ಮೂಡಿಸಿದ ಜಾಗೃತಿಗಾರರ ತ್ಯಾಗಬಲಿದಾನಿಗಳನ್ನು ಪರಿಚಯಿಸಲಾಯಿತು. ಹಾವೇರಿಯ ದೋಂಡಿಯಾ ವಾಗ್, ಸುರಪುರದ ವೆಂಕಟಪ್ಪ ನಾಯಕ, ಈಸೂರಿನ ಪ್ರಕರಣ, ಕರ್ನಾಟಕದಲ್ಲಿ ಗಾಂಧಿಯ ಪ್ರಭಾವ, ಚಿಕ್ಕಬಳ್ಳಾಪುರದ ವಿದುರಾಶ್ವತ್ಥ, ಕಲ್ಯಾಣ ಕರ್ನಾಟಕ ವಿಮೋಚನೆ, ಹೀಗೆ ಹತ್ತು ಹಲವು ಘಟನೆಗಳನ್ನು ಸಾಕ್ಷ್ಯಚಿತ್ರದಲ್ಲಿ ಪ್ರದರ್ಶಿಸಿ ಸ್ವಾತಂತ್ರ್ಯ ಹೋರಾಟಗಾರರನ್ನು ಮತ್ತೊಮ್ಮೆ ಸ್ಮರಿಸುವಂತಾಯಿತು. ಕರ್ನಾಟಕದ ಅಪರಿಚಿತ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆ ಉಳ್ಳ ಪುಸ್ತಕಗಳು ಪ್ರದರ್ಶನಕ್ಕೆ ಮತ್ತು ಮಾರಾಟಕ್ಕೆ ಇಡಲಾಯಿತು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕರು ಡಾ.ಬಿ.ಎಂ. ಶರಭೇಂದ್ರಸ್ವಾಮಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು, ಡಾ.ರಷ್ಮಿರಾಣಿ ಅಗ್ನಿಹೊತ್ರಿ ಪ್ರಾರ್ಥಿಸಿದರು, ವಿಜಯ ರಾಜೇಂದ್ರ ನಿರೂಪಿಸಿದರು, ಡಾ.ಜಿ.ಎಸ್.ಬಿರಾದರ್ ವಂದಿಸಿದರು. ರಾಯಚೂರು ವಿವಿ ಕುಲಸಚಿವ ಪ್ರೊ.ವಿಶ್ವನಾಥ.ಎಂ, ಡಾ.ರಾಘವೇಂದ್ರ ಘತ್ತೇಪೂರ, ವೆಂಕಟೇಶ ಬೇವಿನಬೆಂಚಿ, ಸೇರಿದಂತೆ ವಿವಿಧ ವಿಭಾಗಗಳ ಉಪನ್ಯಾಸಕರು, ವಿದ್ಯಾರ್ಥಿಗಳು, ಭೋದಕೇತರ ಸಿಬ್ಬಂದಿ ಉಪಸ್ಥಿತರಿದ್ದರು.



ರಾಯಚೂರು ವಿವಿ : ರಾಷ್ಟ್ರೀಯ ಸೇವಾ ಯೋಜನಾ ದಿನಾಚರಣೆ

ಶಿಬಿರಾರ್ಥಿಗಳು ಶಿಬಿರವನ್ನು ಸದುಪಯೋಗ ಪಡಿಸಿಕೊಳ್ಳಬೇಕು: ಪ್ರೊ.ಪಾರ್ವತಿ.ಸಿ.ಎಸ್

ಕೃಷ್ಣತುಂಗಾ, ರಾಯಚೂರು : ಶಿಬಿರಾರ್ಥಿಗಳು ಮಾನಸಿಕವಾಗಿ, ದೈಹಿಕವಾಗಿ ಸದೃಢರಾಗಿ, ಸಹೋದರತ್ವ ಎಂಬ ಭಾವನೆಯಿಂದ ಶಿಬಿರದಲ್ಲಿ ಕಾರ್ಯ ನಿರ್ವಹಿಸುವು ದರೊಂದಿಗೆ ಪ್ರತಿಯೊಬ್ಬರು ಶಿಬಿರವನ್ನು ಸದುಪಯೋಗ ಪಡಿಸಿಕೊಳ್ಳಿ ಎಂದು ರಾಷ್ಟ್ರೀಯ ಸೇವಾ ಯೋಜನೆ (ಎನ್ಎಸ್ಎಸ್) ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅಧ್ಯಕ್ಷತೆ ವಹಿಸಿದ ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಪ್ರೊ.ಪಾರ್ವತಿ.ಸಿ.ಎಸ್ ಹೇಳಿದರು.

ರಾಯಚೂರು ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಕೋಶದಿಂದ ಸೋಮವಾರ 'ರಾಷ್ಟ್ರೀಯ ಸೇವಾ ಯೋಜನಾ ದಿನಾಚರಣೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಎನ್.ಎಸ್.ಎಸ್ ಸಂಯೋಜನಾಧಿಕಾರಿ ಮತ್ತು ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳಾದ ಡಾ.ಜಿ.ಎಸ್. ಬಿರಾದಾರ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಯುವಕರು ದೇಶದ ಬೆನ್ನೆಲುಬಾಗಿದ್ದು, ಅವರಲ್ಲಿ ಸಾಮಾಜಿಕ ಕಳಕಳಿ, ಸೇವೆ, ತ್ಯಾಗವನಗನಿಟ್ಟುಕೊಂಡು ದೇಶ ಕಟ್ಟುವಂತಾಗಬೇಕು ಎಂದರು.

ರಾಷ್ಟ್ರೀಯ ಸೇವಾ ಯೋಜನೆ ಮಹಿಳಾ ಘಟಕದ ಪ್ರತಿನಿಧಿ ಡಾ.ಪದ್ಮಜಾ ದೇಸಾಯಿ ಅವರು ಎನ್.ಎಸ್.ಎಸ್ ಘಟಕದ ಚಟುವಟಿಕೆ ಗಳು, ಉದ್ದೇಶಗಳು ಮತ್ತು ಕರ್ತವ್ಯಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು.

ರಾಷ್ಟ್ರೀಯ ಸೇವಾ ಯೋಜನೆ ಘಟಕದ ಪ್ರತಿನಿಧಿ ಬಜಾರಪ್ಪ ಅವರು ರಾಷ್ಟ್ರೀಯ ಸೇವಾ ಯೋಜನೆಯ ಉದ್ದೇಶ ಹಾಗೂ ಸ್ವಯಂ ಸೇವಕರ ಕರ್ತವ್ಯದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಅತಿಥಿ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಸಮಾಜಕಾರ್ಯ ಉಪನ್ಯಾಸಕಿ ಡಾ.ರಶ್ಮಿರಾಣಿ ಅಗ್ನಿಹೋತ್ರಿ ಸ್ವಾಗತಿಸಿದರು. ಇತಿಹಾಸ ವಿಭಾಗದ ಅತಿಥಿ ಉಪನ್ಯಾಸಕ ಕೃಷ್ಣ ನಿರೂಪಿಸಿದರೇ, ಶೃತಿ ನಾಯಕ ಪ್ರಾರ್ಥಿಸಿದರು, ಸೌಮ್ಯ ವಂದಿಸಿದರು.

'ಏನ್ ಚೆಂದ ಅಲಂಕಾರಿಕ ದೀಪಾಗಳು'

– **ಗೌಡಪ್ಪ,** ಪತ್ರಿಕೋದ್ಯಮ ವಿದ್ಯಾರ್ಥಿ

ಹಣತೆ ತರಬೇಕು... ಸ್ವಲ್ಪ ದಿನ ಬಿಟ್ರೆ ಜನ್ರು ಆರಿಸಿ ಬಿಟ್ಟಿದ್ದನ್ನು ತರಬೇಕಷ್ಟೆ... ಎಂದಳು ನನ್ನ ಗೆಳತಿ. ದೀಪಾವಳಿ ಇನ್ನೂ ದೂರ ಐತಿ. ಈಗಲೇ ಯಾಕೆ ಅದರ ಚಿಂತೆ. ಬೇಜ್ಜಾನ್ ಸಿಗ್ತಾವೆ' ಎಂದೆ. ಅದಕ್ಕೆ ಆತ ಅವು ನಮ್ಮ ಕಡೆ ಸಿಗೋ ದೀಪಗಳಲ್ಲಪ್ಪ. ರಾಜಸ್ಥಾನಿ ಹಣತೆಗಳು. ಸೂಪರ್ ಡಿಸೈನ್, ತುಂಬಾ ವೆರೈಟಿಗಳು, ಬಣ್ಣಗಳು. ನೋಡೋದಕ್ಕೆ ಎರಡು ಕಣ್ಣು ಸಾಲದು. ನೋಡಂಗಿದ್ರೆ ನಡಿ ನನ್ನೊಂದಿಗೆ' ಎನ್ನುತ್ತಾ ಆತುರ ಆತುರವಾಗಿ ಕರೆದೊಯ್ದಳು. ನಾವಿಬ್ಬರೂ ಬಸವೇಶ್ವರ ಸರ್ಕಲ್ ಹತ್ತಿರ ಹೋಗಿ ನಿಂತಾಗ, ಖಾಲಿ ಜಾಗದಲ್ಲಿ ಎರಡು ಗೂಟ ಹುಗಿದು ಕಟ್ಟಿದ ಹಗ್ಗಕ್ಕೆ ನೇತು ಹಾಕಿದ್ದ ಲಾಟಿನ್, ಘಂಟೆ ಸರಗಳು, ವೈವಿಧ್ಯಮಯ ದೀಪಗಳು ಕಂಡವು. ಹತ್ತಿರ ಹೋಗಿ ನೋಡಿದರೆ ನೆಲದ ಮೇಲೆಲ್ಲಾ ರಂಗೋಲಿ ಇಟ್ಟಂತೆ ಬಣ್ಣದ ದೀಪಗಳು. ಎಲ್ಲವನ್ನೂ ನೋಡುತ್ತಾ ಹಗ್ಗದ ಮೇಲೆ ನೇತುಹಾಕಿದ್ದ ಲಾಟೀನು ಕೈಯಲ್ಲಿ ಹಿಡಿದುಕೊಂಡೆ. ಅದರ ಮೇಲ್ಭೆ ಸವರಿ ನೋಡಿದೆ. ಅರೆ, ಇದು ಮಣ್ಣಿನ ಲಾಟೀನು' ಎಂದು ಅಚ್ಚರಿಪಟ್ಟೆ. ಅದೇ ಅಚ್ಚರಿಯೊಂದಿಗೆ ವ್ಯಾಪಾರಸ್ಥನ ಕಡೆಗೆ ದೃಷ್ಟಿ ಹಾಯಿಸಿದೆ. ದೇಖೋ ಬಯ್ಯಾ ಸಬ್ ಐಟಂ ಮಿಟ್ಟಿ ಮೆ ಬನಾ ಹೈ..' ಎನ್ನುತ್ತಾ ನನ್ನ ಅಚ್ಚರಿಗೆಲ್ಲ ಒಂದೇ ಸಾಲಿನಲ್ಲಿ ಉತ್ತರಿಸಿದ. ಕನ್ನಡ–ಹಿಂದಿ ಮಿಶ್ರಿತ ಮಾತುಗಳಲ್ಲಿ ವಿವರಿಸುತ್ತಾ, ಮಣ್ಣಿನಿಂದ ಅರಳಿದ ಕಲಾಕೃತಿಗಳ ಲೋಕವನ್ನೇ ತೆರೆದಿಟ್ಟ.

ಮಣ್ಣಿನಿಂದ ತಯಾರಿಸಿದ ಹಣತೆಗಳಿಗೆ ಬಾರಿ ಡಿಮ್ಯಾಂಡ್ ಐತಿ. ಈಗ ಎಲ್ಲಾ ಶೋ ಫ್ಯಾಶನ್‌ಗೆ ಮಣ್ಣಿನಿಂದ ಮಾಡಿದ ನಾನಾ ತರಹದ ಹಣತೆಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ.

ದೀಪಾವಳಿಗೂ ಮುನ್ನ ಆಧುನಿಕ ಯಂತ್ರಗಳ ಮೂಲಕ ತಯಾರಿಸಿದ ಬಣ್ಣ ಬಣ್ಣದ ವಿವಿಧ ವಸ್ತುಗಳುಗೆ ಬೇಡಿಕೆ ಹೆಚ್ಚಾಗಿದೆ.



ಅ.31 ರಂದು ರಾವಿವಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತ್ಯೊತ್ಸವ ಅಂಗವಾಗಿ ವಿಚಾರ ಸಂಕಿರಣ

ಕೃಷ್ಣತುಂಗಾ, ರಾಯಚೂರು : ರಾಯಚೂರು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಇದೇ ಅಕ್ಟೋಬರ್ 31 ಸೋಮವಾರ ಬೆಳಿಗ್ಗೆ 10.30 ಕ್ಕೆ ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟಕರಾಗಿ ಗ್ರಾಮೀಣ ಕ್ಷೇತ್ರ ಶಾಸಕರಾದ ಬಸನಗೌಡ ದದ್ದಲ್ ಮತ್ತು ರಾಯಚೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಹರೀಶ್ ರಾಮಸ್ವಾಮಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ, ಸಿಂಡಿಕೇಟ್ ಸದಸ್ಯರಾದ ಸಂಜಯ್ ಕುಮಾರ್ ಮೂಥಾ, ವಿದ್ಯಾ ವಿಷಯಕ ಪರಿಷತ್ ಸದಸ್ಯರಾದ ರಾಜ ಶ್ರೀನಿವಾಸ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ನಂತರ ಮೊದಲ ಗೋಷ್ಠಿ ಮಧ್ಯಾಹ್ನ 12.30 ರಿಂದ 2.00 ರವರೆಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರದ ಮುಖ್ಯಸ್ಥರಾದ ಡಾ.ಅಮರೇಶ ಯತಗಲ್ ಹಾಗೂ ಕಲಬುರಗಿ ಶ್ರೀಶರಣ ಬಸವೇಶ್ವರ ಕಲಾ ಮಹಾವಿದ್ಯಾಲಯ ಪ್ರಾಧ್ಯಾಪಕರಾದ ಪ್ರೊ.ವೆಂಕಣ್ಣ ಡೊಣ್ಣೇಗೌಡರ್ ಅವರು ಗೋಷ್ಠಿ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಮಧ್ಯಾಹ್ನ 2.30 ರಿಂದ 4.00 ರವರೆಗೆ ನಡೆಯಲಿರುವ ಎರಡನೇ ಗೋಷ್ಠಿಯಲ್ಲಿ ಗೋಕಾಕಿನ ಖ್ಯಾತ ಸಂಶೋಧಕರು ಹಾಗೂ ನಿವೃತ್ತ ಪ್ರಾಂಶುಪಾಲರಾದ ಡಾ.ಅರ್ಜುನ ಪಂಗಣ್ಣವರ ಹಾಗೂ ಖ್ಯಾತ ಸಾಹಿತಿಗಳಾದ ವೀರಹನುಮಾನ ಅವರು ಗೋಷ್ಠಿ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾಜಿ ಶಾಸಕರಾದ ತಿಪ್ಪರಾಜು ಹವಾಲ್ದಾರ್, ರಾವಿವಿ ಸಿಂಡಿಕೇಟ್ ಸದಸ್ಯರಾದ ಪ್ರೊ.ಶಿವಬಸಪ್ಪ ಮಾಲಿಪಾಟೀಲ್, ವಿದ್ಯಾವಿಷಯಕ ಪರಿಷತ್ ಸದಸ್ಯರಾದ ಮಲ್ಲಿಕಾರ್ಜುನ ಹಳ್ಳೂರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ನ.3 ರಂದು ರಾಯಚೂರು ವಿವಿಯಲ್ಲಿ ಉದ್ಯೋಗ ಮೇಳ

ಕೃಷ್ಣತುಂಗಾ, ರಾಯಚೂರು : ರಾಯಚೂರು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನ.3 ಗುರುವಾರದಂದು ಬೆಳಿಗ್ಗೆ, 9 ಗಂಟೆಯಿಂದ ಉದ್ಯೋಗ ಮೇಳ ಆಯೋಜಿಸಲಾಗಿದೆ. ಆಸಕ್ತರು ಈ ಕೆಳಗೆ ನಮೂದಿಸಿದ ಗೂಗಲ್ ಫಾರ್ಮ್‌ನ್ನು ತುಂಬಬೇಕು. ಉದ್ಯೋಗ ಮೇಳದಲ್ಲಿ ಅಭ್ಯರ್ಥಿಗಳು ಆಯ್ಕೆಯಾದರೆ ತಕ್ಷಣ ಅವರಿಗೆ ಕಾರ್ಯಾ ಆದೇಶವನ್ನು ನೀಡಿ ಮೂರು ತಿಂಗಳ ತರಬೇತಿಯ ಅವಧಿಯಲ್ಲಿ ಪ್ರತಿ ತಿಂಗಳಿಗೆ ಆರು ಸಾವಿರ ರೂಪಾಯಿಗಳನ್ನು ನೀಡುತ್ತಾರೆ.

ಅಭ್ಯರ್ಥಿಗಳು ಕನಿಷ್ಟ ಯಾವುದೇ ಪದವಿಯನ್ನು ಪಡೆದವರಾಗಿರಬೇಕು. ಅಭ್ಯರ್ಥಿಗಳು ತಮ್ಮ ಪೋಷಕರು ತಂದೆ– ತಾಯಿ ಅಥವಾ ಪೋಷಕರು ತಮ್ಮೊಂದಿಗೆ ಕರೆ ತಕ್ಕದ್ದು. ಬೇಕಾದ ದಾಖಲಾತಿಗಳು : ಎಸ್ಎಸ್ಎಲ್‌ಸಿ, ಪಿಯುಸಿ, ಪದವಿ ಅಂಕಪಟ್ಟಿ. ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಪ್ರಮಾಣ ಪತ್ರ, ಆದಾರ ಕಾರ್ಡ, ಪಾನ್ ಕಾರ್ಡ, ಬ್ಯಾಂಕ್ ಪಾಸ್ ಪುಸ್ತಕ ಪೋಷಕರದು, ಮೂರು ತಿಂಗಳ ಆದಾಯ ಪ್ರಮಾಣ ಪತ್ರ ಸಂಬಳ ಚೀಟಿ, ಐದು ಪಾಸ್ಪೋರ್ಟ್ ಸೈಜ್ ಪೋಟೋಗಳು. ಅಭ್ಯರ್ಥಿಗಳು ರಿಜಿಸ್ಟರ್ ಮಾಡಿಕೊಳ್ಳಲು ಈ ಕೆಳಗಿನ ಗೂಗಲ್ ಫಾರಂ ಲಿಂಕ್‌ನ್ನು ಉಪಯೋಗಿಸ ತಕ್ಕದ್ದು

https://docs.google.com/forms/d/e/1FAIpQLSfpRDXGztqGYazaSLipjldauvGlvqURg6ls8n7A0j0lByjFqQ/viewform?usp=sf_link

ಕಲುಷಿತ ಕುಡಿಯುವ ನೀರಿನ ಪೂರೈಕೆ; ಅಧಿಕಾರಿಗಳ ದಿವ್ಯ ಮೌನ– ಆತಂಕದಲ್ಲಿ ಜನತೆ

– **ದೊಡ್ಡಪ್ಪ, ಪತ್ರಿಕೋದ್ಯಮ ವಿದ್ಯಾರ್ಥಿ**

ಕೃಷ್ಣತುಂಗಾ, ರಾಯಚೂರು : ನಗರದ ಕವಿತಾಳ ಪಟ್ಟಣದ ಅನೇಕ ವಾರ್ಡಗಳ ವ್ಯಾಪ್ತಿಯಲ್ಲಿ ಕೆಸರು, ಮಿಶ್ರಿತ ಕಲುಷಿತ ಕುಡಿಯುವ ನೀರು ಪೂರೈಕೆಯಾಗುತ್ತಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಜನರು ತೀವ್ರ ಆತಂಕಗೊಂಡಿದ್ದಾರೆ.

ಸಮೀಪದ 73 ಕ್ಯಾಂಪ್ ನಲ್ಲಿ ನಿರ್ಮಿಸಿರುವ ಕೆರೆಯಿಂದ ಪೈಪ್ ಲೈನ್ ಮುಖಾಂತರ ಕುಡಿಯುವ ನೀರಿನ ಓರ್ವ ಹೆಡ್ ಟ್ಯಾಂಕಗಳಿಗೆ ನೀರನ್ನು ಸಂಗ್ರಹ ಮಾಡಲಾಗುತ್ತಿದೆ. ನಂತರ ಪಟ್ಟಣದ ವಿವಿಧ ವಾರ್ಡುಗಳಿಗೆ ನೀರು ಸರಬರಾಜಾಗುತ್ತದೆ. ಪಟ್ಟಣದಲ್ಲಿ 16 ವಾರ್ಡುಗಳಿದ್ದು, ಸರಿಸುಮಾರು 25 ಸಾವಿರ ಜನಸಂಖ್ಯೆ ಇದೆ. ಬಹುತೇಕ ಜನ ಇದೆ ನೀರನ್ನು ಕುಡಿಯಲು ಬಳಸುತ್ತಾರೆ.

ಕೆರೆಯ ಹತ್ತಿರ ನೀರು ಫಿರ್ಟ್ ಮಾಡುವ ಯಂತ್ರವನ್ನು ಅಳವಡಿಸಿದ್ದು, ವರ್ಷಗಳೇ ಕಳೆದರೂ ಅದು ಕಾರ್ಯನಿರ್ವಹಿಸುತ್ತಿಲ್ಲ. ಕಲುಷಿತ ನೀರು ಸೇವನೆಯಿಂದ ಜನರಲ್ಲಿ ವೈರಲ್ ಫೀರ್ವ, ನೆಗಡಿ, ಕೆಮ್ಮು, ಚರ್ಮರೋಗ, ವಾಂತಿ ಬೇಧಿ ಸೇರಿದಂತೆ ಅನೇಕ ರೋಗಗಳು ಬಾಧಿಸುತ್ತಿದ್ದು, ಪ್ರತಿನಿತ್ಯ ಆಸ್ಪತ್ರೆಗೆ ಅಲೆದಾಡುವಂತಾಗಿದೆ.

ಇಷ್ಟೆಲ್ಲಾ ಆದರೂ ಸ್ಥಳೀಯ ಪಟ್ಟಣ ಪಂಚಾಯತ್ ಅಧಿಕಾರಿಗಳು ಕ್ಯಾರೆ ಎನ್ನತ್ತಿಲ್ಲ ಎನ್ನುವುದೇ ದುರಂತ.

ಅಲ್ಲಲ್ಲಿ ನೀರಿನ ಪೈಪ್ ಲೈನ್ ಒಡೆದಿದ್ದು, ಕೆಲವೊಂದು ಕಡೆ ಚರಂಡಿಯ ನೀರು ಪೈಪ್ ಮುಖಾಂತರ ಕುಡಿಯುವ ನೀರಿನ ಓರ್ವ ಹೆಡ್ ಟ್ಯಾಂಕ್ ಸೇರುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಪಟ್ಟಣ ಪಂಚಾಯತಿಯ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಮಾಹಿತಿ ಇದ್ದರೂ, ಜಾಣ ಮೌನ ವಹಿಸಿರುವುದು ಜನರಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ.

ಪಟ್ಟಣ ಪಂಚಾಯತಿಯ ಅಧಿಕಾರಿಗಳು ಕೂಡಲೇ ಕಾರ್ಯ ಪ್ರವೃತ್ತರಾಗಿ ಸಮಸ್ಯೆಯನ್ನು ಪರಿಹರಿಸಿ, ಪಟ್ಟಣದ ಜನತೆಗೆ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಅಭಿಪ್ರಾಯ: ಕಲುಷಿತ ಕುಡಿಯುವ ನೀರು ಪೂರೈಕೆ ಆಗುತ್ತಿರುವುದರ ಬಗ್ಗೆ ಅನೇಕ ಬಾರಿ ಪ.ಪಂ. ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ.

–ಎಂ.ರಾಘವೇಂದ್ರ ಶೆಟ್ಟಿ,ಪ.ಪಂ.12ನೇ ವಾರ್ಡ ಸದಸ್ಯರು.

ಒಂದು ವಾರದ ಹಿಂದೆ ಈ ವಿಷಯ ನನ್ನ ಗಮನಕ್ಕೆ ಬಂದಿದ್ದು, ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಈ ಕುರಿತು ಮಾತನಾಡಿದ್ದೇವೆ. ಸಿಬ್ಬಂದಿಯೊಂದಿಗೆ ಚರ್ಚೆ ನಡೆಸಿ ಸಮಸ್ಯೆ ಸರಿಪಡಿಸಲು ತಿಳಿಸಿದ್ದೇವೆ.

–ಜಗದೀಶ್ ಭಂಡಾರಿ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳು.

ಓದುಗರ ಪತ್ರ

ಚಮರೀಮೃಗಗಳ ಸಾಕಾಣಿಕೆಗೆ ಸುಸಂಧಿ

ಭಾರತೀಯ ಆಹಾರ ಸುರಕ್ಷತೆ ಮತುತಿ ಗುಣಮಟ್ಟ ಪ್ರಾಧಿಕಾರ (ಎಎಸ್ಎಸ್ಎಐ) ಚಮರೀಮೃಗದ (ಯಾಕ್) ಮಾಂಸವನ್ನು ಭಕ್ಷಿಸಲು ಯೋಗ್ಯ ಎಂದು ಇತ್ತೀಚೆಗೆ ಅನುಮೋದಿಸಿದ್ದು ಸ್ವಾಗತಾರ್ಹ. 2021 ರಲ್ಲಿ ನಡೆಸಿದ ಚಮರೀಮೃಗಗಳ ಗಣತಿಯ ಪ್ರಕಾರ, ನಮ್ಮ ದೇಶವು ಕೇವಲ 28,000 ಚಮರೀಮೃಗಗಳ ಸಂಖ್ಯೆ ಹೊಂದಿದ್ದು, ಇದು 2012 ರಲ್ಲಿ ನಡೆಸಿದ ಗಣತಿಗೆ ಹೋಲಿಸಿದಲ್ಲಿ ಶೇಕಡ 50 ರಷ್ಟು ಕುಸಿತವಾಗಿದೆ ಎಂದು ವರದಿಯಾಗಿದೆ. ಚಮರೀಮೃಗ ನಮ್ಮ ದೇಶದಲ್ಲಿ ಈಗ ಅಳವಿನಂಚಿನಲ್ಲಿ ಇರುವುದರಿಂದ ಈ ಅನುಮೋದನೆ ಇದರ ಸಂಖ್ಯೆ ಹೆಚ್ಚಿಸಲು ಅನುಕೂಲ ಮಾಡಿಕೊಡುವುದರಲ್ಲಿ ಎರಡು ಮಾತಿಲ್ಲ.

ಪ್ರಮುಖವಾಗಿ ಪೂರ್ವೋತತಿರ ರಾಜ್ಯಗಳಲ್ಲಿ (ಅರ್ಥಾತ್ ಹಿಮಾಲಯ ಪ್ರದೇಶಗಳಲ್ಲಿ) ಸಾಂಪ್ರದಾಯಿಕ ಕೃಷಿ ಚಟುವಟಿಕೆಗಳಿಗೆ ಅಲ್ಲಿನ ವಾತಾವರಣ ಅನಾನುಕೂಲವಿರುದರಿಂದ ರೈತರಿಗೆ ತಮ್ಮ ಜೀವನೋಪಾಯವನ್ನು ಭದ್ರತೆಗಳಿಸಿಕೊಳ್ಳಲು, ಚಮರೀಮೃಗಳನ್ನು ಸಾಕುವಕ್ರಮ ಇತ್ತು. ರೈತರಿಗೆ ಬಹು ಆಯಾಮ ಅದರಲ್ಲೂ ಸಾಮಾಜಿಕ–ಸಾಂಸ್ಕೃತಿಕ–ಆರ್ಥಿಕ ಪಾತ್ರವನ್ನುವಹಿಸುತಿತ್ತು. ಅತೀ ಕಷ್ಟದ ಪ್ರಾಚೀನ ಸ್ಥಳಾಂತರ (ಟ್ರಾನ್ಸ್ಹ್ಯೂಮಾನ್ಸ್) ಪದ್ದತಿಯಲ್ಲಿ ಚಮರೀಮೃಗಗಳನ್ನು ಸಾಕಾಣಿಕೆ ಮಾಡುವುದರಿಂದ ಈ ಭಾಗದ ಯುವ ಜನರು ನಿರೋತ್ಸ ತೋರಿದ್ದರು ಮತ್ತು ಪೂರ್ವೋತ್ತರ ರಾಜ್ಯಗಳಲ್ಲಿನ ಯುವಜನತೆ

ಕೆಲ ಅರಸಿ ವಲಸೆ ಹೋಗಿದ್ದರು,ಈಗ ಎಎಸ್ಎಸ್ಎಐ ಈ ಪ್ರಾಣಿಯನ್ನು ಭಕ್ಷಿಸಲು ಯೋಗ್ಯವೆಂದು ಅನುಮೋದನೆ ಮಾಡುವುದರಿಂದ ಹೆಚ್ಚಿನ ಯುವ ಜನತೆ ಚಮರೀಮೃಗಗಳ ಸಾಕಾಣಿಕೆಯಲ್ಲಿ ಆಸಕ್ತಿ ತೋರುತ್ತಾರೆ ಮತುತಿ ಚಮರೀಮೃಗಗಳ ಸಂಖ್ಯೆಯಲ್ಲಿ ಖಂಡಿತವಾಗಿ ಏರಿಕೆಯಾಗಲಿದೆ ಹಾಗೂ ಉತ್ತರ ಮತ್ತು ದಕ್ಷಿಣ ಭಾರತದ ಬೇರೆ ಬೇರೆ ರಾಜ್ಯಗಳಿಗೆ ಕೆಲಸ ಅರಸಿ ವಲಸೆ ಹೋಗಿರುವ ಯುವಜನತೆ ಮರಳಿ ತಮ್ಮ ತಮ್ಮ ಊರುಗಳಿಗೆ ಬಂದು ನೆಲಸುವಲ್ಲಿ

ಈ ಅನುಮೋದನೆ ಖಂಡಿತವಾಗಿಯೂ ಸಹಾಯ ಮಾಡುತ್ತದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಚಮರೀಮೃಗ ಹಾಲು ಹೆಚ್ಚು ಪೌಷ್ಟಿಕವಾಗಿದೆ, ಕೊಬ್ಬಿನಿಂದ ಸಮೃದ್ಧವಾಗಿದೆ, ಅಗತ್ಯ ಖನಿಜಗಳನ್ನು ಮತುತಿ ಔಷಧೀಯ ಮೌಲ್ಯವನ್ನು ಹೊಂದಿದ್ದರು ಸಹ ಹಾಲಿನ ಬೆಲೆ ತೀರಾ ಕಡಿಮೆಯಾಗಿದೆ. ಎನ್ಆರ್ಸಿ–ಯಾಕ್ ಪ್ರಕಾರ ಚಮರೀಮೃಗವನ್ನು ಸಾಕುವವರಿಗೆ ಈ ಪ್ರಾಣಿಯ ಹಾಲು,ಚರ್ಮ, ಉಣ್ಣೆ ಮತ್ತು ಮಾಂಸದಿಂದ ಈಗ ಆರ್ಥಿಕವಾಗಿ ಲಾಭ ಪಡೆಯಲು ಸಹಾಯ ಮಾಡುತ್ತದೆ ಎಂದು ತಿಳಿಸಿದೆ.

– ರಾಜಶೇಖರ, ಪತ್ರಿಕೋದ್ಯಮ ವಿದ್ಯಾರ್ಥಿ.

ಪ್ರಕಾಶಕರು ಹಾಗೂ ಗೌರವ ಸಂಪಾದಕರು: ಪ್ರೊ. ಪಾರ್ವತಿ.ಸಿ.ಎಸ್, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರು, **ಪ್ರಧಾನ ಸಂಪಾದಕರು:** ಡಾ.ಪ್ರಭಾ ಬಸವರಾಜ ಸ್ವಾಮಿ, ಅತಿಥಿ ಉಪನ್ಯಾಸಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು, **ವಿದ್ಯಾರ್ಥಿ ಸಂಪಾದಕರು:** [redacted]ತ, ಮೊಹಮದ್ ಇಸ್ಮಾಯಿಲ್, ರಾಜಶೇಖರ್. ಸ್ನಾತಕೋತ್ತರ ದ್ವಿತೀಯ ಸೆಮಿಸ್ಟರ್ ಪತ್ರಿಕೋದ್ಯಮ ವಿದ್ಯಾರ್ಥಿಗಳು. **ಸೂಚನೆ:** ಇ[redacted] ಮಾರಟಕ್ಕಲ್ಲ.